ಆ) ಆರೆ ಸುಖಾಸೀನ ವಾಹನವನ್ನು ಬೆಳ್ತಂಗಡಿಯಿಂದ ಬೆಂಗಳೂರಿಗೆ ಓಡಿಸಲಾಗುತ್ತಿದೆ. ಈ ವಾಹನವೇ ಸಾಕಷ್ಟು ಪ್ರೋತ್ಸಾಹದಾಯಕವಾಗಿಲ್ಲದಿರುವುದರಿಂದ ಈ ಮಾರ್ಗದಲ್ಲಿ ಸುಖಾಸೀನ ವಾಹನವನ್ನು ಓಡಿಸುವುದು ಸೂಕ್ತವೆನಿಸುವುದಿಲ್ಲ.

ದಾವಣಗೆರೆಯಲ್ಲಿ ನ್ಯಾಯಾಲಯ ಭವನದ ನಿರ್ಮಾಣದ ಬಗ್ಗೆ

೧೨೬(೨೩೩) ಶ್ರೀ ಪಂಪಾಪತಿ (ದಾವಣಗೆರೆ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ :—

(ಅ) ದಾವಣಗೆರೆ ನಗರದಲ್ಲಿ ನ್ಯಾಯಾಲಯಗಳು ಬೇರೆ ಬೇರೆ ಕಟ್ಟಡಗಳಲ್ಲಿದ್ದು ಇದರಿಂದ ಕಕ್ಷಿದಾರರಿಗೆ, ವಕೀಲರಿಗೆ ತೊಂದರೆಯಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ?

(ಆ) ಹಾಗಿದ್ದಲ್ಲಿ ಸದರಿ ನ್ಯಾಯಾಲಯಗಳ ಕಛೇರಿಗಳನ್ನು ಒಂದೇ ಕಟ್ಟಡದಲ್ಲಿರುವಂತೆ ವ್ಯವಸ್ಥೆ ಮಾಡಲು ಸರಕಾರದವರು ಕ್ರಮ ಕೈಕೊಳ್ಳುವರೇ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).—

(ಅ) ಹೌದು.

(ಆ) ದಾವಣಗೆರೆಯಲ್ಲಿ ನ್ಯಾಯಾಲಯ ಭವನ ನಿರ್ಮಿಸಬೇಕೆಂಬ ಪ್ರಸ್ತಾಪವಿದೆ ಮತ್ತು ಉಚ್ಚ ನ್ಯಾಯಾಲಯದೊಡನೆ ಸಮಾಲೋಚಿಸಿ ಈ ಸಂಬಂಧದಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

ಮೈಸೂರು ನಗರಾಭಿವೃದ್ಧಿ ಮಂಡಳಿಯಲ್ಲಿ ಅಲ್ಪಸಂಖ್ಯಾತರ ಕೋಮಿನವರಿಗೆ ಮನೆ ಅಥವಾ ಮನೆ ಜಾಗವನ್ನು ಕಾಯ್ದಿರಿಸುವ ಬಗ್ಗೆ

೧೨೭ (೧೪೦) ಶ್ರೀಮತಿ ಮುಕ್ತಾರುನ್ನಿಸಾ (ನರಸಿಂಹರಾಜ).—ಈ ಕೆಳಕಂಡ ಪ್ರಶ್ನೆಗೆ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಯವರು ದಯೆಯಿಟ್ಟು ಉತ್ತರಿಸುವರೆ :—

ಮೈಸೂರು ನಗರಾಭಿವೃದ್ಧಿ ಮಂಡಳಿಯಲ್ಲಿ ಅಲ್ಪ ಸಂಖ್ಯಾತರ ಕೋಮಿನವರಿಗೆ ಮನೆ ಅಥವಾ ಮನೆಯ ಜಾಗವನ್ನು ಕಾಯ್ದಿರಿಸಲು ಅವಕಾಶವಿದೆಯೇ?

ಶ್ರೀ ಎ. ಲಕ್ಷ್ಮೀಸಾಗರ್.—(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಇಲ್ಲ.

ಚಿಂದೂಲಿ ಆಲಂದ್ ಮತ್ತು ಬಾಲ್ಕಿಯಲ್ಲಿ ಹೊಸ ಡಿಪೋಗಳನ್ನು ನಿರ್ಮಿಸುವ ಬಗ್ಗೆ

೧೨೮ (೫೩೦) ಶ್ರೀ ವೀರಯ್ಯಸ್ವಾಮಿ (ಚಿಂಚೋಳಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ :—

ಅ) ಚಿಂದೂಲಿ. ಆಲಂದ್ ಮತ್ತು ಭಾಲ್ಕಿಯಲ್ಲಿ ಹೊಸ ಡಿಪೋಗಳನ್ನು ನಿರ್ಮಿಸುವ ಬಗ್ಗೆ ಸರ್ಕಾರವು ಮಂಜೂರಾತಿ ನೀಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಡಿಪೋಗಳನ್ನು ತೆರೆಯಲು ಆಗುತ್ತಿರುವ ವಿಳಂಬಕ್ಕೆ ಕಾರಣಗಳೇನು?

ಇ) ಸದರಿ ಡಿಪೋಗಳಿಗಾಗಿ ಭೂಸ್ವಾಧೀನವನ್ನು ಮಾಡಲು ತೆಗೆದುಕೊಂಡಿರುವ ಕ್ರಮಗಳೇನು?

ಈ) ಮೇಲ್ಕಂಡ ಸ್ಥಳಗಳಲ್ಲಿ ಡಿಪೋಗಳನ್ನು ತೆರೆಯಲು ಎಷ್ಟು ಕಾಲಾವಕಾಶ ಬೇಕಾಗುತ್ತದೆ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಾರಿಗೆ ಮತ್ತು ಪಸಶಿ ರಾಜ್ಯಮಂತ್ರಿಗಳು).—

ಅ) ಇಲ್ಲ.

ಆ)
ಇ)
ಈ) } ಮೇಲಿನ ಉತ್ತರದಿಂದ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ಬಳ್ಳಾರಿಯ ನಗರಸಭೆಯ ಕಿನೇ ವರ್ಗದ ನೌಕರರ ಜೇಷ್ಠತಾ ಪಟ್ಟಿಯನ್ನು ಕಡೆಗಣಿಸಿರುವುದರ ಬಗ್ಗೆ

೧೫೯(೯೬) ಶ್ರೀ ಎಂ. ರಾಮಪ್ಪ (ಬಳ್ಳಾರಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಮತ್ತು ನಗರಾಭಿವೃದ್ಧಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

ಅ) ರಾಯಚೂರು, ಗುಲ್ಬರ್ಗ, ಬೀದರ್ ನಗರ ಸಭೆಯ ಕಿರಿಯ ನೌಕರರರಿಗೆ ಮುಂಬಡ್ತಿ ಕೊಡುವಲ್ಲಿ ಬಳ್ಳಾರಿ ಮತ್ತು ಹೊಸಪೇಟೆ ನಗರಸಭೆಯ ಮೂರನೆಯ ವರ್ಗದ ನೌಕರರ ಜೇಷ್ಠತಾ ಪಟ್ಟಿಯನ್ನು ಕಡೆಗಣಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಸರಕಾರವು ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳುವುದು ಮತ್ತು ಯಾವಾಗ ?

ಶ್ರೀ ಎ. ಲಕ್ಷ್ಮಿಸಾಗರ್. —(ಕಾನೂನು ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

ಅ) ಇಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಕೈಗಾರಿಕೆಗಳಿಗೆ ಅಭಿವೃದ್ಧಿ ಸಾಲಗಳನ್ನು ಕೊಡುವ ಬಗ್ಗೆ

೧೩೦(೫೧) ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

ಅ) ಅಭಿವೃದ್ಧಿ ಸಾಲಗಳನ್ನು ಕೈಗಾರಿಕೆಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಕೊಡುವುದರಲ್ಲಿ ನಿರ್ದಿಷ್ಟವಾದ ದೋರಣೆಯೇನು ? ದೋರಣೆಯ ಪ್ರಕಾರ ಈ ತರಹದ ಸಾಲವನ್ನು ಕೊಡುವುದರಲ್ಲಿ ಗರಿಷ್ಟ ಸಾಲವೆಷ್ಟು ?

ಆ) ಕೊಡಬೇಕಾದ ಮಾರಾಟ ತೆರಿಗೆ ಬದಲು ಸಾಲ ಕೇಳಿರುವ ಯಾವುದಾದರೂ ಪ್ರಸ್ತಾಪಗಳು ಸರ್ಕಾರದ ಮುಂದೆ ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕಾಗಿ ಬಂದಿದ್ದು, ಬಾಕಿ ಉಳಿದಿದೆಯೇ ? ಹಾಗಿದ್ದಲ್ಲಿ ಅವುಗಳು ಈಗ ಯಾವ ಹಂತದಲ್ಲಿವೆ ?

ಇ) ಅವುಗಳು ಸರ್ಕಾರೀ ಆದೇಶದ ಪ್ರಕಾರ ಇರುವಾಗ ಅವುಗಳನ್ನು ಇತ್ಯರ್ಥಪಡಿಸುವಲ್ಲಿ ವಿಳಂಬವಾಗುವುದಕ್ಕೆ ಕಾರಣಗಳೇನು ?

ಈ) ಪ್ರತಿ ತಾಲ್ಲೂಕಿನಲ್ಲಿಯೂ ಕೈಗಾರಿಕಾ ಪಸಾಹತು ಸ್ಥಾಪನೆ ಮಾಡುವುದರಲ್ಲಿ ಸಾಧನೆಯೇನು ? ಮತ್ತು ವಿಳಂಬಗಳಿಗೆ ಕಾರಣಗಳೇನು ?

ಉ) ೧೯೮೪-೮೫ರಲ್ಲಿ ಹಾಗೂ ೧೯೮೫-೮೬ ರಲ್ಲಿ ಪ್ರಾರಂಭಿಸಿರುವ ಕೈಗಾರಿಕೆಗಳ ಸಂಖ್ಯೆಎಷ್ಟು ತಿಂಗಳುವಾರು ಮಾಹಿತಿಯನ್ನು ಒದಗಿಸಬೇಕು ?

ಊ) ಗೊಬ್ಬರದ ಕಾರ್ಖಾನೆಯನ್ನು ಕರ್ನಾಟಕದಲ್ಲಿ ಸ್ಥಾಪಿಸುವಂತೆ ವಿಶೇಷವಾದ ಪ್ರಯತ್ನ ಸರ್ಕಾರ ಮಾಡುತ್ತಿದೆಯೇ ? ಹಾಗಿದ್ದಲ್ಲಿ ಅದನ್ನು ಕಾರವಾರ ಪ್ರದೇಶದಲ್ಲಿ ಸ್ಥಾಪಿಸಲಾಗುವುದೇ ?